ಸತ್ಯವಾದಿ
SATYAVADI

ಸಂಪಾದಕರು: ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯುಲು [ಬಿಡಿ ಪ್ರತಿ 3 ಪೈ

ಮೈಸೂರು ಸರ್ಕಾರದ ಕರ್ತವ್ಯ ಲ ಬ್ರಷ್ಟತೆಯೇ ಜನ ಮರಣಕ್ಕೆ ಕಾರಣ ರ

ಡ್ರಗ್ ಆಕ್ಟ್ ಮತ್ತು ಫಾರ್ಮಸಿ ಆಕ್ಟ್ ಎರಡು ಮಸೂದೆಗಳೂ ಇವೆ ಎಂದು ತಿಳಿದು ಬಂದಿದೆ. ವಿದೇಶಿ ಔಷಧಿಗಳಿಗೆ ಸಂಬಂಧ ಪಡುವ ಈ ಕಾನೂನನ್ನು ದೇಶೀಯ ವೈದ್ಯಕ್ಕೆ ಏಕೆ ಮಾಡಬೇಕಾಗಿದೆಯೋ ತಿಳಿಯದಾಗಿದೆ. ಆಯುರ್ವೇದ ಔಷಧಿಗಳೆಲ್ಲವು ರಸ, ವೀರ್ಯ ವಿಪಾತಗಳಾದಿಗಳ ಆಧಾರದ ಮೇಲೆ ಗುಣಗಳನ್ನು ತೋರಿಸತಕ್ಕವುಗಳಾಗಿದ್ದರೆ ಅವುಗಳಿಗೆ ವಿದೇಶಿ ತತ್ವಗಳಂತೆ ಸಂಶೋಧನೆ ನಡೆಯಿಸುವುದು ಹೇಗೆ ಸಾಧ್ಯ? ಅಲ್ಲದೇ ಹೆಚ್ಚಾಗಿ ಅಹಾರ ವಸ್ತುಗಳಿಂದಲೇ ತಯಾರಾಗತಕ್ಕ ಔಷಧಿಗಳ ಮೇಲೆ ಕಾನೂನಿನ ನಿರ್ಬಂಧ ಹೇಗೆ ವುದೆಂದರೆ ಅದರಲ್ಲಿ ನ್ಯಾಯವೇನಿದೆ?

ಈ ವಾಯು ಕಾನೂನುಗಳಲ್ಲಿ ಪ್ರತಿ ಕಾನೂನಿಗೂ ಒಂದೊಂದು ಬೋರ್ಡನ್ನು ಸರ್ಕಾರದವರು ರಚಿಸುವುದಾಗಿಯೂ ಆ ಬೋರ್ಡುಗಳಲ್ಲಿ ವೈದ್ಯರಾದವರು ಅಲ್ಪ ಸಂಖ್ಯೆಯಲ್ಲಿ ಇರುವುದಾಗಿಯೂ ತಿಳಿದುಬಂದಿದೆ. ವೈದ್ಯಕೀಯ ವಿಷಯವಾಗಿ ಔಷಧಿಗಳ ಗುಣ ಇವೆ ನಿರ್ಮಾಣ ವಿಷಯವೇ ಆಗಲಿ ಯಾವುದನ್ನಾದರೂ ಯೋಚಿಸಲು ಶಾಸ್ತ್ರಜ್ಞರಾದ ವೈದ್ಯರೇ ಇರಬೇಕಲ್ಲದೆ ಅಂಥ ಬೋರ್ಡಿನಲ್ಲಿ ವೈದ್ಯೇತರರು ಇರುವುದರಿಂದ ಯಾವ ಲಾಭವೂ ಇಲ್ಲ. ಅದರಲ್ಲೂ ಶಾಸ್ತ್ರಕ್ಕೆ ಹಾಸಿಯೇ ಹೆಚ್ಚಾಗಿ ವೈದ್ಯರಿಗೆ ಆಗುವ ಇಂಥ ಅನ್ಯಾಯಗಳನ್ನು ಸಂಸ್ಥಾನದ ವೈದ್ಯರೆಲ್ಲರೂ ಸಹಿಸಿಕೊಂಡಿರುವುದು ಸಾಧ್ಯವಿಲ್ಲ. ಈ ಕಾನೂನುಗಳು ಅಗತ್ಯವಾಗಿ ಬೇಕೆಂದು ಜನತೆಯಿಂದ ಅಭಿಪ್ರಾಯವಿದ್ದಲ್ಲಿ ಸರ್ಕಾರದವರು ತಂಬೇಕೇ ಹೊರತು ಈ ಅಧಿವೇಶನದಲ್ಲಿ ಮಂಡಿಸಕೂಡದು. ಸಂಸ್ಥಾನಾದ್ಯಂತ ವೈದ್ಯರೆಲ್ಲರೂ ಎಚ್ಚೆತ್ತು ತಮ್ಮ ಪ್ರತಿಭಟನೆಯನ್ನೂ ಸೂಕ್ತ ಸಲಹೆಯನ್ನೂ ಸರ್ಕಾರಕ್ಕೆ ಕಳುಹಿಸಿಕೊಡುವಿರಾಗಿ ನಂಬಿದ್ದೇನೆ.

ಪ್ರ. ಪ್ರ. ಸಭೆ

ಮೈಸೂರು, ಅ 28: ಶ್ರೀ ವಿ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಪ್ರತಿನಿಧಿ ಸಭೆಯಲ್ಲಿ ಶ್ರೀ ಮಾದೇಶ್ವರ ಸ್ವಾಮಿ ಜಾತ್ರೆಯಲ್ಲಿ ಕಾಲರಾ ಉಪದ್ರವ ಉಂಟಾಗಿ ಮೈಸೂರಿಗರನೇಕರು ಸತ್ತ ಬಗ್ಗೆ ಸಂಸ್ಥಾನದ ಆರೋಗ್ಯ ಶಾಖೆ ಸೂಕ್ತ ಕರ್ತವ್ಯ ಮಾಡದಿದ್ದುದೇ ಕಾರಣ ಎಂಬರ್ಥದ ಅವಸರವ ಠರಾವು ನಿನ್ನೆ ಸಂಜೆ ಚರ್ಚೆಯಾಗಿ ತಿರಸ್ಕೃತವಾಯಿತು. ಮಾನ್ಯ ಸದಸ್ಯರನೇಕರು ಶ್ರೀ ವೆಂಕಟನಾರಾಣಪ್ಪನವರಿಂದ ಸೂಚಿತವಾದ ಠರಾವನ್ನು ಸಮರ್ಥಿಸಿ ಜನರ ಸಾವಿಗೆ ಸರ್ಕಾರದ ಕರ್ತವ್ಯಭ್ರಷ್ಟತೆಯೇ ಕಾರಣ ಎಂದರು. ಕಾಂಗ್ರೆಸ್ ಸಕ್ತ ಮಂತ್ರಿತರ ಸದಸ್ಯರು ಸರ್ಕಾರ ಕರ್ತವ್ಯ ಭ್ರಷ್ಟತ್ವವನ್ನೇನೂ ಮಾಡಿಲ್ಲ. ಮಾಡಬೇಕಾದ ಕ್ರಮವನ್ನೆಲ್ಲ ಸರ್ಕಾರ ಕೈಗೊಂಡಿದೆ ಎಂದು ಠರಾವನ್ನು ವಿರೋಧಿಸಿದರು. ಆರೋಗ್ಯ ಸಚಿವ ಶ್ರೀ ವಹಮದ್ ಷರೀಫರು ಉತ್ತರ ಕೊಡುತ್ತಾ ಕಾಲರಾ ಹಂಡೆದಂತೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ನಗರ ವಾಂಸಭೆ ಶಾಸನ 2 ಮತ್ತು 3 ನೆ ತಿದ್ದುಪಡಿ ಮಸೂದೆಗಳು ಸಭೆಯ ಅಂ ಕ್ಕೂ ಪಡೆದವು.

ನಿನ ವೃತ್ತಾಂತ

ಗಾಂಧೀಜಿ ಕೊಲೆ ಮೊಖದ್ದಮೆಯಲ್ಲಿ ಮರಣದಂಡನೆ ತಿಕ್ಕೆಗೆ ಗುಯಾಗಿರುವ ನಾಥುರಾಮ್ ಗೋಡ್ಸೆ ಮತ್ತು ನಾರಾಯಣ ಆಪ್ಟೆಯರನ್ನು ನವೆಂಬರ್ 15 ನೆಯ ತಾರೀಖು ಗಲ್ಲಿಗೇರಿಸಬೇಕೆಂಬುದಾಗಿ ವಿಶೇಷ ನ್ಯಾಯಾಧೀಶರು ವಾರೆಂಟ್ ಗಳನ್ನು ಹೊರಡಿಸಿದ್ದಾರೆ. ಮರಣದಂಡನೆಗೆ ಗುರಿಯಾಗಿರುವವರು ಗವರ್ನರ್ ಜನರಲ್ ಅವರಿಗೆ ಕ್ಷಮಾಯಾಚನಾ ಅರ್ಜಿ ಸಲ್ಲಿಸಲು 7 ದಿನಗಳ ಕಲಾವಧಿ ಕೊಡುವ ಸಂಪ್ರದಾಯವಿದೆ.

ನಾರ್ವೆಯಲ್ಲಿ ನಗರ ಭವನದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಆದಾಯವನ್ನು ತೋರಿಸುವ ರಜಿಸ್ಟರ್ ಗಳನ್ನು ಇಡಲಾಗಿದೆಯೆಂದೂ, ಕಾಳಸಂತೆಯಲ್ಲಿ ಯಾವುದೂ ಹಣ ಮಾಡಿರುವರೆಂದು ಯಾವಪ್ರಜೆಗಾದರೂ ಸಂದೇಹ ಬಂದರೆ ಆವ್ಯಕ್ತಿಯ ಆದಾಯದ ಕಾಗದ ಪತ್ರ ನೋಡಲು ಪ್ರತಿ ಪ್ರಜೆಗೂ ಹಕ್ಕಿದೆಯೆಂದೂ, ಇದರಿಂದ ಅಲ್ಲಿ ಲಂಚಕೋರತನ ಲವಲೇಶವೂ ಇಲ್ಲವೆಂದೂ ಭಾರತ ಪಾರ್ಲಿಮೆಂಟಿನ ಕಾರ್ಯದರ್ಶಿ ಎ. ಎಚ್. ಕೌಲ್ ತಿಳಿಸಿದರು.

ಸಾಗರದಲ್ಲಿ ನಡೆದ ನಿನ್ನೆಳನದಲ್ಲಿ ನವೆಂಬರು 14 ರೊಳಗಾಗಿ ಏಕೀಕರಣ ಪ್ರಶ್ನೆ ಇತ್ಯರ್ಥವಾಗಬೇಕೆಂದೂ, ಇಲ್ಲವಾದರೆ ಮೈಸೂರು ಮಂತ್ರಿಮಂಡಲ ಮತ್ತು ಕಾಂಗ್ರೆಸ್ ಮುಖಂಡರಲ್ಲಿ ಅವಿಶ್ವಾಸ ವ್ಯಕ್ತಪಡಿಸಲಾಗಬೇಕೆಂದು ನಿರ್ಣಯ ಘುಂಜೂರಾಗಿದೆ

ಮೈಸೂರು ನಗರದ ಕೆಲವೆಡೆ ಕಾಲರಾ ಸೋಂಕ ಕಂಡುಬರುತ್ತಿರುವುದರಿಂದ, ಅವಶ್ಯಕವಾದ ಕಡೆ ಆರೋಗ್ಯ ನಿಯಮಕ್ಕೆ ವಿರೋಧವಾಗಿ ನಡೆಸತ್ತಿರುವ ಹೋಟಲುಗಳು ಮುಚ್ಚಿಸಲ್ಪಡುವೆವೆಂದು ತಿಳಿಯಬಂದಿತೆ

ನೇತಾಜಿ ಸುಭಾಸ್ ಚಂದ್ರಬೋಸರು ಕಮ್ಯೂನಿಸ್ಟ್ ಚೀನಾದಲ್ಲಿ ದೊಡ್ಡ ಅಧಿಕಾರದ ಪದವಿಯಲ್ಲಿದ್ದು ಫಿಲ್ಡ್‌ಮಾರ್ಷಲ್ ಆಸ್ಯಂಗ್ ಎಂಬ ಸರನಿನಿಂದಿರುವರೆಂದು ವದಿಯಾಗಿದೆ ನೇತಾಜಿ ಸುಭಾಸರು ಮಾವತ್ಸೆತುಂಗರಿಗೆ ವಿಶ್ವಾಸದ ರಾಜಕೀಯ ಸಲಹೆಗಾರರಾಗಿ ಸಹ ಇರುವರೆಂದು ಗೊತ್ತಾಗಿದೆ

ಬೆಳಗಾಂ ಮುನಿಸಿಪಾ

ವಿಜ್ಞಾನ ಶಾಸ್ತ್ರ

ನಾ ಗಾ ಲೊ

(ಮುಂದುವರಿದುದು)

ಸಧ್ಯಕ್ಕೆ ಅಮೆರಿಕದಲ್ಲಿ 10 ಲಕ್ಷಗ ಳ ಟೆಲಿವಿಜ್ಞ ರಿಸೀವರ್‌ಗಳು ವುಪಯೋಗದಲ್ಲಿವೆ ಈ ವರ್ಷದ ಕೊನೆಯೊಳಗಾಗಿ ಈ ಸಂಖ್ಯೆಯು ಮೂರರಷ್ಟು ಬೆಳೆಯುವದುತ್ತೆ! ಆಗ ಟೆಲಿವಿಜ್ಞ ಪ್ರೇಕ್ಷಕರ ಸಂಖ್ಯೆಯೂ 150 ಲಕ್ಷಗಳಷ್ಟು ಹೆಚ್ಚಬಹುದಾಗಿದೆ.

ಟೆಲಿವಿಜ್ಞ ಮೂಲಕ ಬರುವ ಚಿತ್ರಗಳನ್ನು ಪ್ರೇಕ್ಷಕರಿಗೆ ಬೇಕಾಗುವಷ್ಟು ದೊಡ್ಡವಾಗಿಯೂ ಸಣ್ಣವಾಗಿಯೂ ಕೂಡ ಮಾಡಿಕೊಳ್ಳಬಲ್ಲ ಬದಲಾವಣೆಗಳು ಕೂಡ ಕಂಡುಹಿಡಿಯಲ್ಪಟ್ಟಿವೆ. ಇಂದು ಅಮೆರಿಕದಲ್ಲಿ 32 ಪಟ್ಟಣಗಳಲ್ಲಿ 65 ಟೆಲಿವಿಜ್ಞ ಸ್ಟೇಷನ್ನುಗಳು ಕೆಲಸಮಾಡುತ್ತಿವೆ. 60 ಹೊಸ ಸ್ಟೇಷನುಗಳು ನಿರ್ಮಾಣವಾಗುತ್ತಿವೆ. 1953 ನೇ ವರ್ಷಕ್ಕೆ 400 ಸ್ಟೇಷನ್ನುಗಳು ಆಗಬಹುದು.

ಟೆಲಿವಿಜ್ಞ ಅಂದುಕೊಂಡಷ್ಟು ವ್ಯಾಪಿಸದೆ ಇರುವುದಕ್ಕೆ ಕಾರಣವು ವ್ಯಯಾಧಿಕ್ಯತೆಯೇ ಆಗಿದೆ : ಒಂದು ಟೆಲಿವಿಜ್ಞ ಸ್ಟೇಷನ್ನನ್ನು ನಿರ್ಮಿಸಲು ಸುಮಾರು 13 ಲಕ್ಷ ರೂಪಾಯಿಗಳಾಗುವವು : ಇಷ್ಟು ಖರ್ಚುಮಾಡಿ ಸ್ಟೇಷನ್ನನ್ನು ನಿರ್ಮಾಣ ಮಾಡಿದನಂತರ ಅದನ್ನು ನಿರ್ವಹಿಸಲು ಎಷ್ಟೋ ಮಂದಿ ಟಿಕ್ನೀಯಿಸ್ ಪ್ರದರ್ಶಕರು, ಬೇಕಾಗಿರುತ್ತದೆ. ಇಷ್ಟು ವೆಚ್ಚವನ್ನು ಮಾಡಬೇಕೆಂದರೆ ಟೆಲಿವಿಜನ್ನನ್ನು ಬಯಸುವವರ ಸಂಖ್ಯೆಯು ಎಷ್ಟೋ ಬೆಳೆಯಬೇಕಾಗಿದೆ. ಇಷ್ಟು ಖರ್ಚನ್ನು ಮಾಡಲಾರದೆ ಒಂದು ಟೆಲಿವಿಜ್ಞ ಸ್ಟೇಷನ್ನನ್ನು ಕೇವಲ ಸಿನಿಮಾ ಚಿತ್ರಗಳನ್ನು ಪ್ರದರ್ಶಿಸಲು ಮಾಡಿದೆ. 15 ನಿಮಿಷಗಳ ಕಾರ್ಯಕ್ರಮವನ್ನು ನಡಿಸಬೇಕಾದರೆ 5 ನಿಮಿಷಗಳ ಸಿನಿಮಾ ಚಿತ್ರಗಳು ಮೂರು ಬೇಕಾಗುತ್ತವೆ. ಅದಕ್ಕೆ ಖರ್ಚು 17 ರೂ.ಗಳಾಗುತ್ತದೆ ಒಂದು ಗಂಟೆಗೆ 200 ರೂ. ಗಳಾಗುತ್ತವೆ. ಅಂದರೆ 4 ಗಂಟೆಗಳ ಕಾರ್ಯಕ್ರಮವನ್ನ ನಡಿಸಲು 800 ರೂ. ಖರ್ಚುಮಾಡದೆ ವಿಧಿಯಿಲ್ಲ. ಇದೆಲ್ಲಾ ಚಿತ್ರಗಳ ಪ್ರದರ್ಶನಕ್ಕೆ ಆಗುವ ಖರ್ಚು ಚಿತ್ರವೇ ಇವಲ್ಲದೆ ಸ್ಟೇಷನ್ ನಿರ್ವಾಹ ಸ್ಟೇಷನ್ ಖರ್ಚುಗಳು ಇವಕ್ಕಾಗಿ ಇವೆ ಒಂದು ರೇಡಿಯೋ ನಾಟಕವನ್ನು

CITY MUNICIPALITY, MYS

Sealed tenders will be received up to 4 p. m. on the 5 th Novem Municipal Engineer for (1) Constructing a Police outpost and fruitstallin Bu (2) Improving the underground connection at the junction of Sayyaji Rao Roa near Rice Mills, Mandi Mohalla (3) Providing separate urinals in the middle ground floor of Municipal Offices (4) Constructing a cattle pound in Bidar Devaraj Mohalla (5) Constructing 'L' shaped Slabbed drain in II conservancy Lane, M gageri, between Rampartwall Road and Omarkhayam Road, II Ediga, Mandi Mohal (6) constructing size stone storm water drain in Ramamandiram Road, II Ediga, betwee Ommarkhayam Road and Rampartwall Road Mandi Mohalla (7) constructing 'V shaped drains on both sides of Ramalingeswara Road in Chamundi Extention- Each tend must be accompanied with a chellan for having remitted Rs 190, Rs 100, Rs 70, Rs 12 Rs 40. Rs 85, Rs 95 respectively in the Municipal Treasury as earnest money. For fu particulars please see the office notice board.

(Sd) V K Mukundan
Municipal Engineer

ಉಡುಪುಗಳನ್ನು ಅತಿ ಬೊಕ್ಕಟೆವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣ ಶಕ್ತಿಯನ್ನು ತಿಳಿಯಲಾರಿರಿ.
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ.
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

Opera— Daily 3 Shows From 27–10–49

SON OF ZORRO

A Full Republic Serial full of thrills & excitements

ಮೈಸೂರು ಸಿಟಿ ರೇಷನ್ ಆಫೀಸು

ನೋಟಿಫಿಕೇಷನ್

ನಂ R 6-10/49-50 ತಾ|| 10–1

ಮೈಸೂರು ಸಿಟಿಯಲ್ಲಿರುವ ಸರ್ಕಾರಿ ಡಿಪೋ, ಮೊಹಲ್ಲಾ ಡಿಪೋ, ವರ್ತಕರ ಡಿಪೋ ಕಾರ ಸಂಘಗಳಿಗೆ ಇದೇ ಮು ಸೋಮವಾರ ಮೊಹರಂ ಹಬ್ಬ ಯುಕ್ತ ಪೂರ್ತಾ ರಜಕೊಡಲ್

(ಸಹಿ) ಡಿ. ಜೆ.
ರೇಷನಿಂಗ
ಮೈಸೂ

Woodlands—
— ಬೆಳಗಿನ ಪ್ರದರ್ಶ
28—10—49
ಲಾರು ಲ
ರೋಮಾಂಚಕ ಹಿಂದಿ ಚಿತ್ರ

ವುಡ್ ಲ್ಯಾಂಡ್ಸ್

29—10—49 ರಿ
Doosri Shadi
ಮುಂತಾಜ್, ಶಾಂತಿ, ಕುಮಾರ್
ಪ್ರಮಿಳಾ, ಡೇವಿಡ್ ಪಾತ್ರವಹಿ
ದುಃ ಶಾ